ನೀಡಿ, ಕಾರ್ಯಗತಗೊಳಿಸುವಂತೆ ದಿನಾಂಕ: 06.07.2012ರಲ್ಲಿ ಪತ್ರ ಬರೆಯಲಾಗಿದೆ.

ಊ) ವಾರ್ಷಿಕ ಬೆಳೆ, ವೆಚ್ಚ ಮತ್ತು ಆದಾಯ ನೀಡುವ ಬಗ್ಗೆ ಹಾಗೂ ಸದರಿ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ನದಿ ಜೋಡಣೆ

57 (12), **ಶ್ರೀ ರಾಮಲಿಂಗಾ ರೆಡ್ಡಿ (ಟಿ.ಬಿ.ಎಂ.ಲೇಔಟ್)**

ಪ್ರಶ್ನೆ

ಅ) ದೇಶದಲ್ಲಿನ ಪ್ರಮುಖ ನದಿ ಜೋಡಣೆ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಕೇಳಿದೆಯೇ?

ಇ) ಹಾಗಿದ್ದಲ್ಲಿ, ಈ ಯೋಜನೆಗೆ ರಾಜ್ಯ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ರಾಷ್ಟ್ರದ ಪ್ರಮುಖ ನದಿ ಜೋಡಣೆ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆ.

ಆ) ಜಲ ಸಂಪನ್ಮೂಲ ಮಂತ್ರಾಲಯ ರಾಷ್ಟ್ರೀಯ ಜಲ ಅಭಿವೃದ್ಧಿ ಮಂಡಳಿಯು ನದಿ ಜೋಡಣೆ / ಸಂಪರ್ಕ ಕುರಿತ ಪ್ರಸ್ತಾವನೆಗಳಿಗೆ ಸಹಮತಿ ಕೋರಿದೆ.

ಇ) ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಉಲ್ಲೇಖಿಸಲಾಗಿರುವಂತೆ ಅಂತರ ರಾಜ್ಯ ಜಲ ವಿವಾದ ಪ್ರಕರಣ ಬಾಕಿ ಇರುವ ಹಿನ್ನೆಲೆಯಲ್ಲಿ ನೇತ್ರಾವತಿ–

ಹೇಮಾವತಿ ಸಂಪರ್ಕ ಹೊರತುಪಡಿಸಿ ರಾಷ್ಟ್ರೀಯ ಜಲ ಅಭಿವೃದ್ಧಿ ಮಂಡಳಿಯ ಇತರ ಪ್ರಸ್ತಾವನೆಗಳಿಗೆ ಸಹಮತಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆ

54 (506), **ಶ್ರೀ ರಾಮಚಂದ್ರ ಎಸ್.ವಿ. (ಜಗಳೂರು)**

ಪ್ರಶ್ನೆಗಳು

ಅ) ಭದ್ರಾ ಮೇಲ್ದಂಡೆ ಯೋಜನೆಯ ಎ-ಸ್ಕೀಮ್‌ನಲ್ಲಿ ಸಮಗ್ರ ಜಗಳೂರು ವಿಧಾನ ಸಭಾ ಕ್ಷೇತ್ರವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸುವ ಬಗ್ಗೆ ಕೈಗೊಂಡ ಕ್ರಮಗಳೇನು;

ಆ) ಹಾಗಿದ್ದಲ್ಲಿ, ಎಷ್ಟು ಹೆಕ್ಟೇರ್ ಪ್ರದೇಶವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಲಾಗಿದೆ ಮತ್ತು ಎಷ್ಟು ಟಿ.ಎಂ.ಸಿ. ನೀರನ್ನು ಒದಗಿಸಲು ಸಾಧ್ಯವಾಗುವುದು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರಗಳು

ಅ) ಸರ್ಕಾರದ ಆದೇಶ ಸಂಖ್ಯೆ: ಜಸಂಇ 49 ಕೆಬಿಎನ್ 2009, ದಿನಾಂಕ: 19-03-2012 ಆಧರಿಸಿ, ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕಿಗೆ 1.86 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡಲಾಗಿದ್ದು, ಈ ನೀರನ್ನು ಬಳಸಿಕೊಳ್ಳಲು ಅನುವಾಗುವಂತೆ ವಿಸ್ತೃತ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ, ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳುವಂತೆ ಕರ್ನಾಟಕ ನೀರಾವರಿ ನಿಗಮಕ್ಕೆ ಸೂಚಿಸಲಾಗಿರುತ್ತದೆ. ಅದರಂತೆ ಕ್ರಮ ಜರುಗಿಸಲಾಗುತ್ತಿದೆ.

ಆ) ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕಿಗೆ ಪೊಲ್ಲಾವರಂ ಯೋಜನೆಯ ಅಡಿಯಲ್ಲಿ ಹಂಚಿಕೆ ಮಾಡಲಾದ 1.86 ಟಿ.ಎಂ.ಸಿ. ನೀರನ್ನು ಜಗಳೂರು ಶಾಖಾ ಕಾಲುವೆಯಿಂದ ಹರಿಸಿ ಸುಮಾರು ಒಟ್ಟು 32617 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಇದರಡಿಯಲ್ಲಿ ಸುಮಾರು 1.06 ಟಿ.ಎಂ.ಸಿ. ನೀರನ್ನು ಬಳಸಿ ಜಗಳೂರು ತಾಲ್ಲೂಕಿನಲ್ಲಿ ಸುಮಾರು 18533 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ.